# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 01 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 231 |
| 02 | ಸದಸ್ಯರ ಹೆಸರು | : ಶ್ರೀ ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| 03 | ಉತ್ತರಿಸುವ ದಿನಾಂಕ | : 06.03.2025 |
| 04 | ಉತ್ತರಿಸುವ ಸಚಿವರು | : ಮಾನ್ಯ ಗೃಹ ಸಚಿವರು |

<table>
<tr><th>ಕ್ರ. ಸಂ.</th><th>ಪ್ರಶ್ನೆಗಳು</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಅಕ್ರಮವಾಗಿ ನೆಲೆಸಿರುವ ಪಾಕಿಸ್ತಾನಿ, ಬಾಂಗ್ಲಾದೇಶಿ ಮತ್ತು ರೋಹಿಂಗ್ಯಾ ಮುಸ್ಲಿಮರು ಧರ್ಮದ ಹೆಸರಿನಲ್ಲಿ ನಡೆಯುವ ದೊಂಬಿ ಮತ್ತು ಗಲಭೆಗಳಲ್ಲಿ ನೇರವಾಗಿ ಭಾಗಿಯಾಗುತ್ತಿರುವ ಕುರಿತು ಸರ್ಕಾರದ ನಿಲುವೇನು; ಗಡಿಪಾರು ಮಾಡಲಾಗಿರುವ ಅಕ್ರಮ ವಲಸಿಗರ ಸಂಖ್ಯೆ ಎಷ್ಟು;</td><td>ರಾಜ್ಯದಲ್ಲಿ ಅಕ್ರಮವಾಗಿ ನೆಲೆಸಿರುವ ಪಾಕಿಸ್ತಾನಿ, ಬಾಂಗ್ಲಾದೇಶಿ ಮತ್ತು ರೋಹಿಂಗ್ಯಾ ಮುಸ್ಲಿಮರು ಧರ್ಮದ ಹೆಸರಿನಲ್ಲಿ ನಡೆಯುವ ದೊಂಬಿ ಮತ್ತು ಗಲಭೆಗಳಲ್ಲಿ ನೇರವಾಗಿ ಭಾಗಿಯಾಗುತ್ತಿರುವ ಕುರಿತು ಯಾವುದೇ ಪ್ರಕರಣಗಳು ದಾಖಲಾಗಿರುವುದಿಲ್ಲ.<br><br>ಗಡಿಪಾರು ಮಾಡಲಾಗಿರುವ ಅಕ್ರಮ ವಲಸಿಗರ ವಿವರ ಈ ಕೆಳಕಂಡಂತಿದೆ:-<br>
<table>
<tr><th>ಕ್ರ. ಸಂ.</th><th>ನಗರ/ ಜಿಲ್ಲೆ</th><th>2022</th><th>2023</th><th>2024</th></tr>
<tr><td>1</td><td>ಬೆಂಗಳೂರು ನಗರ</td><td>04</td><td>24</td><td>55</td></tr>
</table>
</td></tr>
<tr><td>ಆ)</td><td>ಕಳೆದ 3 ವರ್ಷಗಳಲ್ಲಿ ಅಕ್ರಮವಾಗಿ ನೆಲೆಸಿರುವ ಮುಸ್ಲಿಮರು ರಾಜ್ಯದಲ್ಲಿ ನಡೆಸಿರುವ ಕ್ರಿಮಿನಲ್ ಪ್ರಕರಣಗಳ ಸಂಖ್ಯೆ ಎಷ್ಟು; ಇದರಲ್ಲಿ ಎಷ್ಟು ಪ್ರಕರಣಗಳಲ್ಲಿ ಆರೋಪಿತರಿಗೆ ಶಿಕ್ಷೆಯಾಗಿದೆ;</td><td>ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಅಕ್ರಮವಾಗಿ ನೆಲೆಸಿರುವ ಮುಸ್ಲಿಮರು ರಾಜ್ಯದಲ್ಲಿ ಭಾಗಿಯಾಗಿರುವ 06 ಕ್ರಿಮಿನಲ್ ಪ್ರಕರಣಗಳ ಮಾಹಿತಿಯು ಈ ಕೆಳಕಂಡಂತಿರುತ್ತದೆ:-<br>
<table>
<tr><th>ಕ್ರ. ಸಂ.</th><th>ನಗರ/ಜಿಲ್ಲೆ</th><th>2022</th><th>2023</th><th>2024</th></tr>
<tr><td>1</td><td>ಬೆಂಗಳೂರು ನಗರ</td><td>02</td><td>03</td><td>01</td></tr>
</table>
ಈ ಪ್ರಕರಣಗಳಲ್ಲಿ 02 ಆರೋಪಿಗಳನ್ನು ಗಡಿಪಾರು ಮಾಡಿದ್ದು, 03 ಆರೋಪಿಗಳು ನ್ಯಾಯಾಂಗ ಬಂಧನದಲ್ಲಿರುತ್ತಾರೆ. ಕೆಲವರು ಜಾಮೀನಿನ ಮೇಲಿರುತ್ತಾರೆ. ಕೆಲವು ಆರೋಪಿಗಳು ತಲೆಮರೆಸಿಕೊಂಡಿರುತ್ತಾರೆ.</td></tr>
<tr><td>ಇ)</td><td>ರಾಜ್ಯದಲ್ಲಿ ಅಕ್ರಮವಾಗಿ ನೆಲೆಸಿರುವ ಪಾಕಿಸ್ತಾನ, ಬಾಂಗ್ಲಾದೇಶಿ ಮತ್ತು ರೋಹಿಂಗ್ಯಾ ಮುಸ್ಲಿಮರು ಭಾರತದ ಪ್ರಜೆಗಳಾಗದೇ ಇರುವುದರಿಂದ ಸರ್ಕಾರವು ನೀಡುವ ಉಚಿತ ಸೌಲಭ್ಯಗಳಾದ ಆರೋಗ್ಯ, ಶಿಕ್ಷಣ</td><td>ಬಂದಿರುವುದಿಲ್ಲ.</td></tr>
</table>

<table>
<tr><td></td><td>ಆಹಾರದಂತಹ ಸೌಲಭ್ಯಗಳನ್ನು ಬಳಸಿಕೊಳ್ಳುತ್ತಿರುವುದರಿಂದ ರಾಜ್ಯದ ಬಡ ಜನರಿಗೆ ಅನ್ಯಾಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಕುರಿತು ಸರ್ಕಾರದ ನಿಲುವೇನು;</td><td></td></tr>
<tr><td>ಈ)</td><td>ಕಳೆದ 2 ವರ್ಷಗಳಲ್ಲಿ ಎಷ್ಟು ಅಕ್ರಮ ವಲಸಿಗರನ್ನು ಗುರುತಿಸಲಾಗಿದೆ; ಎಷ್ಟು ಅಕ್ರಮ ವಲಸಿಗರನ್ನು ಗಡೀಪಾರು ಮಾಡಲಾಗಿದೆ; ಅಕ್ರಮ ವಲಸಿಗರ ಅಕ್ರಮ ವಾಸ್ತವ್ಯಕ್ಕೆ ಸಹಕರಿಸಿದ ಎಷ್ಟು ಜನರ ಮೇಲೆ ಪ್ರಕರಣ ದಾಖಲು ಮಾಡಲಾಗಿದೆ? (ಜಿಲ್ಲಾವಾರು ಮಾಹಿತಿ ನೀಡುವುದು)</td><td>ಕಳೆದ ಎರಡು ವರ್ಷಗಳಲ್ಲಿ ಗುರುತಿಸಿರುವ ಅಕ್ರಮ ವಲಸಿಗರು ಮತ್ತು ಗಡಿಪಾರು ಮಾಡಲಾಗಿರುವ ಅಕ್ರಮ ವಲಸಿಗರ ಮಾಹಿತಿ ಈ ಕೆಳಕಂಡಂತಿದೆ:-<br><br>ಗುರುತಿಸಿರುವ ಅಕ್ರಮ ವಲಸಿಗರು
<table>
<tr><th>ಕ್ರ. ಸಂ.</th><th>ನಗರ/ ಜಿಲ್ಲೆ</th><th>2023</th><th>2024</th></tr>
<tr><td>1</td><td>ಬೆಂಗಳೂರು</td><td>24</td><td>60</td></tr>
<tr><td>2</td><td>ಬೆಂಗಳೂರು ಜಿಲ್ಲೆ</td><td>00</td><td>27</td></tr>
<tr><td>3</td><td>ಹಾಸನ</td><td>00</td><td>03</td></tr>
<tr><td>4</td><td>ಮಂಗಳೂರು</td><td>00</td><td>01</td></tr>
<tr><td>5</td><td>ಶಿವಮೊಗ್ಗ</td><td>00</td><td>12</td></tr>
<tr><td>6</td><td>ಉಡುಪಿ</td><td>00</td><td>10</td></tr>
<tr><td></td><td>ಒಟ್ಟು</td><td>24</td><td>113</td></tr>
</table>
ಗಡಿಪಾರು ಮಾಡಲಾಗಿರುವ ಅಕ್ರಮ ವಲಸಿಗರು
<table>
<tr><th>ಕ್ರ. ಸಂ.</th><th>ನಗರ/ ಜಿಲ್ಲೆ</th><th>2023</th><th>2024</th></tr>
<tr><td>1</td><td>ಬೆಂಗಳೂರು ನಗರ</td><td>24</td><td>60</td></tr>
<tr><td>2</td><td>ಬೆಂಗಳೂರು ಜಿಲ್ಲೆ</td><td>00</td><td>06</td></tr>
<tr><td></td><td>ಒಟ್ಟು</td><td>24</td><td>66</td></tr>
</table>
ಅಕ್ರಮ ವಲಸಿಗರ ಅಕ್ರಮ ವಾಸ್ತವ್ಯಕ್ಕೆ ಸಹಕರಿಸಿದವರ ವಿರುದ್ಧ ಬೆಂಗಳೂರು ನಗರದಲ್ಲಿ ಒಂದು (01) ಪ್ರಕರಣ ದಾಖಲಾಗಿರುತ್ತದೆ.</td></tr>
</table>

ಒಇ 97 ಪಿಎಂಎಸ್ 2025

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು